Sri N. B. SIRDESAI.—May I know, Sir, how many families are treated as displaced families on account of acquisition of their lands coming under the project area ?

Sri VEERENDRA PATIL.—Let the hon. Member put a separate question. I will furnish information.

Sri V. N. PATIL.—Just now Hon. Chief Minister was pleased to say that on account of paucity of funds, Government are not able to carry out most of the projects. After the Bank nationalisation, in view of the change in the financial position is it not posible to take up the projects ?

Sri VEERENDRA PATIL.—Sir, it is too early for me to say how far the State Government is going to benefit by the Bank nationalisation. But if Banks are going to advance money to State Government to take up essential projects, we will whole-heartedly welcome because it will be possible to accelerate the progress under the irrigation projects.

Kabini Irrigation Project

(255) Sri N. HUTCHMASTY GOWDA (Huliyurdurga).—

Will the Chief Minister be pleased to state :—

(*a*) the estimated amount of Kabini Project and the proposed area of Irrigation in the first instance ;

(*b*) The total outlay till the end of June on various items of its works ;

(*c*) the extent of amount of the revised estimate and the proposed atchkat ;

(*d*) the reasons for the increased expenditure on various items ;

(*e*) whether the Engineers have sent proposals stipulating the time limit within which the project is to be completed and the money to be spent each year during the period ;

(*f*) whether the Government have accepted the proposals of the Engineers ?

Sri VEERENDRA PATIL (Chief Minister).—

(*a*) Rs. 320 lakhs.
30,000 Acres.

(*b*) Rs. 472 lakhs

(*c*) Rs. 2,480 lakhs.
1,26,000 acres.

d) (i) Due to increase in the scope of the project

(ii) Due to consequential Increase in length and height of the dam and the required depth of foundation and the necessary canals.

(iii) Due to introduction of Power Dam for generating Hydro-Electric Power.

(iv) Due to increase in the cost of labour and materials.

(*e*) The Engineers have forwarded a programme of work.

(*f*) The progress of work is being considered in the light of available finances.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂಜಿನಿಯರುಗಳು ಕೊಟ್ಟಿರುವ ಸ್ಕೀಂ ಪ್ರಕಾರ ಎಷ್ಟು ವರ್ಷಗಳಲ್ಲಿ ಅಚ್ಚುಕಟ್ಟು ಮಾಡಬೇಕು ? ವರ್ಷ್‌ವರ್ಷ್‌ವೂ ಎಷ್ಟು ಹಣ ಒದಗಿಸಬೇಕು ?

† ಶ್ರೀ ವೀರೇಂದ್ರ ಪಾಟೀಲ್.—ಇಂಜಿನಿಯರುಗಳು ಲೆಕ್ಕ ಹಾಕಿರುವ ಪ್ರಕಾರ 1974ರವರೆಗೆ ಈ ಕೆಲಸವನ್ನು ಎರಡು ರೀತಿಯಿಂದ ಮಾಡಿ ಮುಗಿಸಬೇಕು. ಕೆಲಸ ಮುಗಿಯುವವರೆಗೆ ಅದಕ್ಕೆ ಬೇಕಾದಷ್ಟು ಹಣ ಒದಗಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲಸ ಪೂರ್ಣಮಾಡಲು 20 ಕೋಟಿ ರೂಪಾಯಿ ಬೇಕು. 5 ವರ್ಷಗಳಲ್ಲಿ ಮುಗಿಸಬೇಕೆಂದಿರುವಾಗ ಯಾವ ಯಾವ ವರ್ಷ ಎಷ್ಟು ಹಣ ಒದಗಿಸಬೇಕೆಂದು ಕೇಳಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಅದು ಗೊತ್ತಿಲ್ಲ. ಆದರೆ 1974ನೆಯ ಇಸವಿಯೊಳಗೆ ಮುಗಿಸಬೇಕೆಂದು ಕಾರ್ಯಕ್ರಮ ಹಾಕಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಕೇಳಿರುವುದೇ ಮುಖ್ಯವಾದ ಭಾಗ. ಅದಕ್ಕೆ ಉತ್ತರವಿಲ್ಲದೇ ಹೋದರೆ ಪ್ರಶ್ನೆ ಕಳುಹಿಸಿದ ಉದ್ದೇಶ ವ್ಯರ್ಥವಾಗುವುದು. ಆದುದರಿಂದ (ಉ) ಪ್ರಶ್ನೆಯಲ್ಲಿ ಕೇಳಿರುವಂತೆ ಪ್ರಶ್ನೆಗೆ ಉಚಿತವಾದ ಉತ್ತರ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಪ್ರತಿ ವರ್ಷ ಎಷ್ಟು ಹಣ ಕೊಟ್ಟಿದ್ದಾರೆಂದು ಕೇಳಿದರೆ ಉತ್ತರ ಕೊಡಬಹುದು. ಮುಂದೆ ಎಷ್ಟು ಒದಗಿಸುತ್ತೇವೆಂಬುದನ್ನು ಈಗ ಹೇಳುವುದು ಕಷ್ಟ. ಮುಂದೆ ಒದಗಿಸುವುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಹಣದ ಅನುಕೂಲವನ್ನು ನೋಡಿಕೊಂಡು ಒದಗಿಸಬೇಕಾಗುತ್ತದೆ. ಎಲ್ಲಾ ಕೆಲಸವನ್ನೂ 1974ರೊಳಗೆ ಪೂರ್ಣವಾಗಬೇಕೆಂಬ ಕಾರ್ಯಕ್ರಮವಿದೆಯೆಂದು ಆಗಲೇ ಹೇಳಿದೆ. ಹಣ ಕೊಟ್ಟರೆ ಇಂಜಿನಿಯರುಗಳು 1972ರೊಳಗೇ ಕೆಲಸ ಪೂರೈಸಬಹುದು. ಅಪರಿಗೆ ಆ ಶಕ್ತಿ ಇದೆ. ಆದರೆ ಹಣದ ಪರಿಸ್ಥಿತಿ ನೋಡಿಕೊಂಡು ಸಾಧ್ಯವಿರುವಷ್ಟನ್ನು ಮುಂದೆ ಒದಗಿಸಬೇಕಾಗುತ್ತದೆ. ಈಗಾಗಲೇ ಪ್ರತಿ ವರ್ಷ ಕೊಟ್ಟಿರುವುದನ್ನು ಬೇಕಾದರೆ ಹೇಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ ಸ್ಪಷ್ಟವಾಗಿದೆ. ಇಂಜಿನಿಯರುಗಳು ಕಳುಹಿಸಿರುವ ಪ್ರಪೋಸಲ್ ನಾನು ಕೇಳುವುದು. ಅವರಂತೆ ಸರಕಾರಕ್ಕೆ ಹಣ ಒದಗಿಸಲು ಸಾಧ್ಯವೇ ? ಅವರು ಹಾಕಿರುವ ಕಾರ್ಯಕ್ರಮ ಯಾವ ರೀತಿ ಇದೆ ? ಅದನ್ನು ಸರಕಾರ ಒಪ್ಪಿದೆಯೇ ಹೇಗೆ ? ಇಂಜಿನಿಯರುಗಳು ಕಳುಹಿಸಿರುವ ಯೋಜನೆ ಪ್ರಕಾರ ಪೂರ್ಣಮಾಡಲು ಎಷ್ಟು ಕಾಲ ಬೇಕು ಮತ್ತು ಪ್ರತಿ ವರ್ಷ ಎಷ್ಟು ಹಣ ಒದಗಿಸಬೇಕು ?

ಶ್ರೀ ವೀರೇಂದ್ರ ಪಾಟೀಲ್.—ಅವರು ಕಳುಹಿಸಿರುವ ಪ್ರೋಗ್ರಾಂ ಪ್ರಕಾರ ಬಹುಶಃ ಪ್ರತಿ ವರ್ಷ 3 ಕೋಟಿ ರೂಪಾಯಿಗಳನ್ನು ಒದಗಿಸಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಒಟ್ಟು ಅಂದಾಜು 2,480 ಲಕ್ಷ ರೂಪಾಯಿಗಳಿಗೆ ಆಗಿದೆ, ಈಗ ಕೆಲಸ ಪ್ರಾರಂಭವಾಗಿ ಸುಮಾರು 5—6 ವರ್ಷವಾಗಿದೆ. ಇದನ್ನು ಜಾಗ್ರತೆ ಪೂರ್ಣಮಾಡುವ ವಿಚಾರದಲ್ಲಿ ಸರಕಾರದ ಸ್ಪಷ್ಟವಾದ ನಿಲುವೇನು ?

ಶ್ರೀ ವೀರೇಂದ್ರ ಪಾಟೀಲ್.—ಕೆಲಸ ಪ್ರಾರಂಭಿಸಲಾಗಿದೆ. ಕೆಲವು ವರ್ಷಗಳಲ್ಲಿ ಪೂರ್ಣವಾಗುತ್ತದೆ, ನಿಲ್ಲುವುದಿಲ್ಲ. ಕಷ್ಟವೇನೇ ಬಂದರೂ ಬೇಕಾದ ಹಣ ಒದಗಿಸಲಾಗುವುದು. ಈಗಾಗಲೇ ಟೆಂಡರ್ ಕರೆದು ಕೆಲಸ ಕಂಟ್ರಾಕ್ಟರುಗಳಿಗೆ ವಹಿಸಲಾಗಿದೆ. ಪ್ರೋಗ್ರೆಸ್ ಆದಂತೆ ಹಣ ಒದಗಿಸಬೇಕು. ಉದಾಹರಣೆಗೆ 1968-69ರಲ್ಲಿ 60 ಲಕ್ಷ ರೂಪಾಯಿ ಕೊಟ್ಟಿತ್ತು, ಅದರೆ ಖರ್ಚಾಗಿರುವುದು 113 ಲಕ್ಷದ 18 ಸಾವಿರ. ಪ್ರತಿ ವರ್ಷ ಇದಕ್ಕೆ ಆದಷ್ಟು ಹೆಚ್ಚು ಖರ್ಚು ಮಾಡಲಾಗುವುದು.

1-30 P.M.

Sri H. M. CHANNABASAPPA.—Will the Government be pleased to say whether this reservoir is being constructed as offset reservoir for Amaravathi ?

Sri VEERENDRA PATIL.—I think it is an offset reservoir against Bhavani.

Sri H. M. CHANNABASAPPA.—As offset reservoir, what should be the capacity of this reservoir ?

Sri VEERENDRA PATIL.—19 and odd TMC.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಇಂಜಿನಿಯರುಗಳು 1974ರೊಳಗೆ ಕಟ್ಟಬೇಕೆಂದು ನಿಗದಿಯಾದಂತಹ ಒಂದು ಕಾರ್ಯಕ್ರಮ ಸಲಹಿಸಿದ್ದರಲ್ಲಾ ಆ 1974ನ್ನು ನಿಗದಿಮಾಡುವುದಕ್ಕೆ ಏನಾದರೂ ವಿಶೇಷ ಕಾರಣಗಳು ಉಂಟೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಪ್ರೋಗ್ರಾಂ ಹಾಕಿದ್ದಾರೆ, ಒಳ್ಳೆಯ ಏಜೆನ್ಸಿ ಫಿಕ್ಸಪ್ ಮಾಡಿದ್ದಾರೆ. ಆ ಪ್ರೋಗ್ರೆಸ್ ಮೇನ್‌ಟೇನ್ ಆದರೆ ಇಷ್ಟು ದಿವಸದಲ್ಲಿ ಮುಗಿಸಬಹುದು ಎಂದು ನಿಗದಿ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿದೆ ಯಾವಾಗಲೂ ಟೆಂಡರ್ ಕರೆಯುವ ಮುನ್ನ ಎಷ್ಟು ದಿವಸದಲ್ಲಿ ಕೆಲಸ ಮುಗಿಸಬೇಕೆಂದು ನಿಗದಿ ಮಾಡಿರುತ್ತದೆ, ಅದನ್ನು ಗಮನದಲ್ಲಿಟ್ಟುಕೊಂಡು ಕೊಟ್ಟಂಥ ಕೆಲಸವನ್ನು ಮುಗಿಸಬೇಕಾಗುತ್ತದೆ. 1974ರೊಳಗೆ ನಮಗೆ ಬೇಕಾಗಿರುವಂತಹ ಹಣ ಒದಗಿಸಿದರೆ ಮುಗಿಸುವುದಕ್ಕೆ ಸಾಧ್ಯವಿದೆ ಎಂದು ಪ್ರೋಗ್ರಾಂ ಹಾಕಿ ಅವರು ಕಳುಹಿಸಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರತಿ ಸಾಲಿನಲ್ಲಿ 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕದ್ದು ಇದೆ, ಹಣ ಇಲ್ಲ ಅನ್ನತಕ್ಕದ್ದು ಇಂಜಿನಿಯರುಗಳಿಗೆ ಗೊತ್ತಿದ್ದೂ ಕೂಡ 1974ರೊಳಗೆ ಮುಗಿಸಬೇಕು, ಅದಕ್ಕೆ ತಕ್ಕ ಹಣ ಒದಗಿಸಬೇಕೆಂದು ಕಾರ್ಯಕ್ರಮ ಹಾಕಿರುವುದರಿಂದ ಆ 1974ನ್ನು ನಿಗದಿ ಮಾಡಿರುವುದಕ್ಕೆ ಏನಾದರೂ ಒಂದು ವಿಶೇಷ ಕಾರಣವುಂಟೇ ಎಂಬುದು ನನ್ನ ಪ್ರಶ್ನೆ.

ಶ್ರೀ ವೀರೇಂದ್ರ ಪಾಟೀಲ್.—ಯಾವುದೇ ಒಂದು ಕೆಲಸ ಪ್ರಾರಂಭ ಮಾಡುವ ಮುನ್ನ ಇಂಜಿನಿಯರುಗಳು ಅದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುವುದು ಸ್ವಾಭಾವಿಕ. ಅನೇಕ ಸಲ ಅನೇಕ ಕಾರಣಗಳಿಗಾಗಿ ಅದರ ಪ್ರಕಾರ ಪ್ರೋಗ್ರೆಸ್ ಆಗಲಕ್ಕೆ ಇಲ್ಲ. ಈಗ ಡ್ಯಾಂಮಾರ್ಕ್‌ಗೆ ಬೇಕಾಗುವಂತಹ ಎಲ್ಲ ಟೆಂಡರ್ ಕರೆದು ಏಜೆನ್ಸಿ ಫಿಕ್ಸ್ ಮಾಡಿರುವುದರಿಂದ ಅವರಿಗೆ ಕೊಟ್ಟಂಥ ಕೆಲಸ ಎಷ್ಟು ದಿವಸದಲ್ಲಿ ಮುಗಿಸಬೇಕೆಂಬ ಕಂಡೀಷನ್ ಅದರಲ್ಲಿ ಇರುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು 1974ಕ್ಕೆ ಈ ಕೆಲಸ ಮುಗಿಯುತ್ತದೆ ಎಂಬ ಕಾರ್ಯಕ್ರಮ ಹಾಕಿ ನಮ್ಮ ಕಡೆಗೆ ಕಳುಹಿಸಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—1974ರೊಳಗೆ ಮುಗಿಸಬೇಕೆಂದು ಪ್ರೋಗ್ರಾಂ ಹಾಕಿಕೊಂಡಿದ್ದಾರೆ. ಅದರೊಳಗೆ ಈ ದುರ್ದ್ದಾಪೀ ಪ್ರಾಜೆಕ್ಟ್‌ಗೆ ಹಣ ಒದಗಿಸುವುದಕ್ಕೆ ಪ್ರಯತ್ನ ಪಟ್ಟು, ಹಣ ಒದಗಿಸುವವರೆಗೂ, ಇದು ಮುಗಿಯುವವರೆಗೂ ಮದ್ರಾಸ್ ಅಗ್ರಿಮೆಂಟ್‌ನ್ನು ಮುಂದುವರಿಸುವುದಕ್ಕೆ ಮಾಡಿಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಮಾಡಿಕೊಂಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್ —ಅದರ ಅವಶ್ಯಕತೆಯೇ ಇಲ್ಲ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಇದಕ್ಕೆ 2,480 ಲಕ್ಷ ರೂಪಾಯಿ ಹಣ ಬೇಕು. ಇದನ್ನು ಒದಗಿಸಬೇಕಾದರೆ ವಿಶೇಷ ರೀತಿಯಲ್ಲಿ ಯಾವ ಏರ್ಪಾಡು ಮಾಡುವುದು ಸಿದ್ಧವಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅದೇ ವಿಷಯ ಹೇಳಿದೆ, ಪ್ರತಿವರ್ಷ ಹಣ ಒದಗಿಸುತ್ತಾ ಇದ್ದೇವೆ. ನಮ್ಮ ರಿಸೋರ್ಸ್‌ಸ್ ನೋಡಿಕೊಂಡು ಬಡ್ಜೆಟ್‌ನಲ್ಲಿ ಯಾವ ರೀತಿಯಿಂದ ಹಣ ಒದಗಿಸುವುದಕ್ಕೆ ಸಾಧ್ಯವಿದೆ ಆ ಪ್ರಕಾರ ಒದಗಿಸಬೇಕಾಗುತ್ತದೆ, ಈ ಕೆಲಸಕಾರ್ಯಗಳ ಪ್ರಗತಿ ನಮ್ಮ ಕೈಯಲ್ಲಿ ಇಲ್ಲ, ಟೆಂಡರ್ ಅಕ್ಸೆಪ್ಟ್ ಮಾಡಿಕೊಂಡು ಟೆಂಡರ್ ಕೊಟ್ಟಿರುವುದರಿಂದ ಅವರು ಕೆಲಸ ಮಾಡಬೇಕು. ಉದಾಹರಣೆಗೆ ಹೋದ ವರ್ಷ 60 ಲಕ್ಷ ರೂಪಾಯಿ ಬಡ್ಜೆಟ್ ಪ್ರೊವಿಜನ್ ಇತ್ತು, 116 ಲಕ್ಷ ರೂಪಾಯಿ ಹಣ ಖರ್ಚು ಮಾಡಿದ್ದೇವೆ. ಇನ್ನು ಮುಂದೆಯೂ ಕೂಡ ತ್ವರಿತಗತಿಯಿಂದ ಕೆಲಸಕಾರ್ಯಗಳು ಹೋಗುತ್ತದೆಯೇ ಹೊರತು ಮಂದಗತಿಯಿಂದ ಹೋಗುವುದಕ್ಕೆ ಯಾವ ತರಹದ ಕಾರಣವೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ಕಾರ್ಯಕ್ರಮದ ಪ್ರಕಾರ ಅವರು ಪ್ರೋಗ್ರೆಸ್ ತೋರಿಸಿಲ್ಲವಷ್ಟು ಹಣ ಒದಗಿಸುವುದೇ ಅಥವಾ ನೀವು ನಿರ್ದಿಷ್ಟವಾಗಿ ಇಷ್ಟು ಕೆಲಸ ಮಾಡಬೇಕೆಂದು ಆಜ್ಞೆ ಕೊಟ್ಟು ಅದರಂತೆ ಅವರು ಕೆಲಸ ಮಾಡುವುದೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಕಾರ್ಯಕ್ರಮದ ಪಟ್ಟಿ ಏನಾದರೂ ಕಳುಹಿಸಿದ್ದಾರೆಯೇ ಎಂದು ಹೇಳಿ ಶ್ರೀಮಾನ್ ಹನ್ಮೆಮಾಸ್ತಿಗೌಡರು ಪ್ರಶ್ನೆ ಕೇಳಿದ್ದರು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಈ ಡ್ಯಾಂ ಕನ್‌ಸ್ಟ್ರಕ್ಷನ್ ಆದಷ್ಟು ತ್ವರಿತಗತಿಯಿಂದ ಮುಗಿಸಬೇಕೆಂದು ಹೇಳಿದ್ದೇವೆ, ಅದಕ್ಕೆ ಬೇಕಾಗುವಂತಹ ಹಣ ಒದಗಿಸಬೇಕೆಂದು ಹೇಳುತ್ತಾ ಇದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—1974ರೊಳಗೆ ಈ ಕೆಲಸಕಾರ್ಯಗಳೆಲ್ಲಾ ಮುಗಿಯಬೇಕೆಂಬ ನಿಮ್ಮ ನಿಲುವಿಗನುಸಾರವಾಗಿ ಕೆಲಸಗಳನ್ನು ಮುಗಿಸಬೇಕಾಗಿದ್ದರೆ ಸರ್ಕಾರದವರು ಆ ಕಂಟ್ರಾಕ್ಟರ್‌ರುಗಳಿಗೆ ಇಂತಿಷ್ಟು ಕೆಲಸಗಳನ್ನು ಇಂತಿಷ್ಟು ಕಾಲದಲ್ಲಿ ಮುಗಿಸಬೇಕೆಂದು ಸ್ಪಿಪ್ಯುಲೇಟ್ ಏನಾದರೂ ಮಾಡಿದ್ದಾರೆಯೇ ಅಥವಾ ಅವರು ಸರ್ಕಾರದವರು ಒದಗಿಸತಕ್ಕ ಹಣಕ್ಕನುಸಾರವಾಗಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದಾರೋ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಹಣವನ್ನು ಒದಗಿಸುವುದಕ್ಕೆ ಎಷ್ಟರಮಟ್ಟಿಗೆ ಶಕ್ತಿ ಇದೆಯೋ ಅಷ್ಟರಮಟ್ಟಿಗೆ ಅದರ ಪ್ರೋಗ್ರೆಸ್ ಸಾಗುತ್ತಿದೆ. ಮಾನ್ಯ ಸದಸ್ಯರು 1974 ಮುಗಿಯುವುದರೊಳಗೆ ಅಲ್ಲೇನೂ ಕೆಲಸವಾಗುವುದಿಲ್ಲ ಎಂದು ಅವರ ಭಾವನೆ ಇದ್ದಹಾಗಿದೆ. ಅದು ಸರಿಯಲ್ಲ. ನಮಗೆ ಹಣದ ಸೌಕರ್ಯ ಸಿಕ್ಕಿದರೆ ಆ ಕೆಲಸವಿನ್ನೂ 1974ಕ್ಕೆ ಮೊದಲೇ ಮುಗಿಯಲೂಬಹುದು. ಆ ರೀತಿ ಆ ಕಾರ್ಯವನ್ನು ನೆರವೇರಿಸಲು ಸರ್ಕಾರದವರು ಎಲ್ಲ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ನೇಮಕ ಮಾಡಿಕೊಂಡಿರುವ ಆ ಟೆಕ್ನಿಕಲ್ ಕಮಿಟಿಯ ವ್ಯಾಪ್ತಿಯಲ್ಲಿ ಇದರ ಕಾರ್ಯಕ್ರಮಗಳು ಬರುತ್ತವೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಹೌದು, ಬರುತ್ತವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾದರೆ ಇದರ ಬಗ್ಗೆ ಆ ಟೆಕ್ನಿಕಲ್ ಕಮಿಟಿ ಮತ್ತು ರಿಸೋರ್ಸಸ್ ಕಮಿಟಿ ಎಂಬುದಾಗಿ ಎರಡು ಕಮಿಟಿಗಳನ್ನು ಏಕೆ ಮಾಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ರಿಸೋರ್ಸಸ್ ಕಮಿಟಿಯನ್ನು ಮಾಡಿರತಕ್ಕದ್ದು ಆ ಕೆಲಸಕ್ಕೆ ಹೆಚ್ಚು ಹೆಚ್ಚು ಹಣವನ್ನು ಒದಗಿಸತಕ್ಕ ಮಾರ್ಗಗಳನ್ನು ಕಂಡುಹಿಡಿಯುವುದಕ್ಕೆ ಮತ್ತು ಅದಕ್ಕೆ ಹೆಚ್ಚು ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡುವುದಕ್ಕಾಗಿ ಅದನ್ನು ಮಾಡಿದೆ. ಅದರಿಂದ ನಮ್ಮ ಕೆಲಸಕಾರ್ಯಗಳು ತ್ವರಿತವಾಗಿ ಮುಗಿಯಬಹುದೆಂಬ ನಂಬಿಕೆ ಇದೆ.

ಶ್ರೀ ಎನ್. ಎ. ಚನ್ನೇಗೌಡ.—ಈ ಯೋಜನೆಯು ಹಳೇ ಮೈಸೂರು ಪ್ರದೇಶದಲ್ಲಿರುವುದರಿಂದ ಇದಕ್ಕೆ ಸರ್ಕಾರ ಹೆಚ್ಚು ಹಣವನ್ನು ಒದಗಿಸತಕ್ಕ ಬಗ್ಗೆ ಉದಾಸೀನಭಾವನೆಯಿಂದ ಇದೆಯಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಎತ್ತಿರತಕ್ಕ ಆ ಒಂದು ವಿಚಾರದಲ್ಲಿ ಯಾವ ತರಹೆಯ ಅರ್ಥವೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಕ್ನಿಕಲ್ ಸಮಿತಿಯ ವ್ಯಾಪ್ತಿಯಲ್ಲಿ ಈ ಪ್ರಾಜೆಕ್ಟಿನ ಕೆಲಸ ಕಾರ್ಯಗಳು ಬರುವುದಿಲ್ಲವೆಂದಮೇರೆ ಅದನ್ನು ಏತಕ್ಕೆ ನೇಮಕ ಮಾಡಿದಿರಿ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಅನೇಕ ಮಾನ್ಯ ಸದಸ್ಯರು ಆ ನದಿಯಲ್ಲಿ ನೀರೆಷ್ಟಿದೆ, ಎಷ್ಟು ನೀರನ್ನು ಈಗ ಬಳಸಲಾಗಿದೆ, ಅದರ ಬಗ್ಗೆ ನಮ್ಮ ಹಕ್ಕೆಷ್ಟಿದೆ ಎಂಬ ಅನೇಕ ವಿಚಾರಗಳನ್ನು ಎತ್ತಿದ್ದರು. ಆ ಸಂಶಯಗಳನ್ನು ನಿವಾರಣೆ ಮಾಡುವುದಕ್ಕೆ ಆ ಸಮಿತಿಯನ್ನು ಮಾಡಲಾಯಿತು

(ಶ್ರೀ ವೀರೇಂದ್ರ ಪಾಟೀಲ್)

ಇನ್ನು ರಿಜೋರ್ಸಸ್ ಸಮಿತಿಯನ್ನು ಏತಕ್ಕೆ ನೇಮಕಮಾಡರಾಯಿತೆಂಬುದನ್ನಾಗಲೇ ಹೇಳಿದ್ದೇನೆ. ಹಣದ ಅನುಕೂಲತೆ ದೊರೆತರೆ ಸರ್ಕಾರ ಈ ಕಾಮಗಾರಿಯನ್ನು 1974ರವರೆಗೂ ನಿಲ್ಲಿಸದೆ ಇದನ್ನು 1972ರೊಳಗೇ ಮುಗಿಸಬೇಕೆಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದು ಸಾಧ್ಯವಾಗ ಬಹುದು ಎಂಬ ಆಸೆ ನನಗಿದೆ.

Rural Industries Project Scheme in Tumkur District

296. Sri G. T. GOVINDA REDDY (Madhugiri).—

Will the Minister for Industries, Information and Publicity be pleased to state :—

(*a*) the taluks of Tumkur District that have come under the jurisdiction of Rural Industrial Project Scheme ;

(*b*) whether the Central Government will be compelled to make the project applicable to the entire district ?

Sri A. P. APPANNA (Deputy Minister for Industries).—

(*a*) Tumkur and Gubbi Taluks.

(*b*) Year after year the amount of grant from the Central Government is decreasing. As such, in the present situation it is not possible to compel the Central Government to make the project scheme applicable to the entire Tumkur District.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಈ ರೂರಲ್ ಇಂಡಸ್ಟ್ರಿಯಲ್ ಯೋಜನೆಯನ್ನು ನಮ್ಮ ಜಿಲ್ಲೆಯಲ್ಲಿ ಏಕೆ ಹೆಚ್ಚು ಹೆಚ್ಚು ವಿಸ್ತಾರ ಮಾಡುತ್ತಿಲ್ಲ?

ಶ್ರೀ ಎ. ಪಿ. ಅಪ್ಪಣ್ಣ.—ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ದಿನದಿನಕ್ಕೂ ಕಡಿಮೆ ಯಾಗುತ್ತಿರುವುದರಿಂದ ಇದರ ವ್ಯಾಪ್ತಿಯನ್ನು ಹೆಚ್ಚುಮಾಡುತ್ತಿರುವುದನ್ನು ಕೈಬಿಡಲಾಗಿದೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ತುಮಕೂರು ಜಿಲ್ಲೆಯಲ್ಲಿ ರೆಯಿನ್ ಫಾಲ್ಸ್ ಬಹಳ ಕಡಿಮೆಯಾಗಿರುವುದರಿಂದ ಗ್ರಾಮಾಂತರ ಕೈಗಾರಿಕೆಗಳನ್ನು ಅಲ್ಲಿ ಪ್ರಾರಂಭಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—1968-69ರಲ್ಲಿ ಮೈಸೂರು ರಾಜ್ಯದಲ್ಲಿ ಮೂರು ಪ್ರಾಜೆಕ್ಟ್ ಗಳಿಗಾಗಿ ಕೇಂದ್ರ ಸರ್ಕಾರ ಕೊಟ್ಟ ಅಥ ಹಣ, 9 ಲಕ್ಷ 90 ಸಾವಿರ ರೂಪಾಯಿಗಳು. ಈ ವರ್ಷ 4 ಲಕ್ಷ 46 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಈಗ ಇತಕ್ಕ ಪ್ರಾಜೆಕ್ಟ್ ಏರಿಯಾ ಯೋಜನೆಗಳಿಗೆ ಬೇಕೆಂದು ನಿಗದಿಮಾಡಿದ್ದೇವೆ. ಅದಕ್ಕೇ ಈ ಹಣ ಸಾಲದೆ ಇರುವುದರಿಂದ ಬೇರೆ ವ್ಯವಹಾರಕ್ಕೆ ಇದರಲ್ಲಿ ಹಣ ತೆಗೆಯಲು ಬಹಳ ಕಷ್ಟವಾಗುತ್ತದೆ.

Sri M. K. BOMME GOWDA.—What are the criteria to select places for these rural industries ?

Sri A. P. APPANNA.—The criteria for selection are certain directions given by the Planning Commission. There must be infra structure, communications, electricity and there must be scope for raw material in the rural areas and for providing employment in the industrial sector.